

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕಾಲಚಕ್ರದ ಅಡಿಯಲ್ಲಿರಬೇಕಾದ ಎಚ್ಚರ

ಇನ್ನೆರಡು ದಿನ ಕಳೆದರೆ ಹೊಸ ವರ್ಷ ಆರಂಭವಾಗುತ್ತದೆ. ಈಗ ಚಾಲ್ತಿಯಲ್ಲಿರುವ 2011ನೆಯ ಇಸವಿ ಹಳೆಯ ವರ್ಷ ಎನಿಸಿಕೊಂಡು ಗತಕಾಲಕ್ಕೆ ಸರಿದುಹೋಗುತ್ತದೆ. ಹಳತು, ಹೊಸತು ಎಂಬ ಈ ಪ್ರಭೇದಗಳು ವಾಸ್ತವವಾಗಿ ಕಾಲದಲ್ಲಿಲ್ಲ. ಭಾರತೀಯ ದಾರ್ಶನಿಕರು ಕಾಲವನ್ನು 'ಪರ' ಮತ್ತು 'ಅಪರ' ಎಂದು ಎರಡು ಭಾಗಗಳಾಗಿ ವರ್ಗೀಕರಿಸಿದ್ದಾರೆ. 'ಪರ' ಎನಿಸಿಕೊಂಡ ಕಾಲ (time) ಅಖಂಡ. ಅದು ಅನಾದಿ, ಅನಂತ. ಮನುಷ್ಯನ ಗ್ರಹಿಕೆಗೆ ನಿಲುಕದ್ದು. ಅದೇ ರೀತಿ ಮನುಷ್ಯನ ಗ್ರಹಿಕೆಗೆ ನಿಲುಕದ ಮತ್ತೊಂದೆಂದರೆ ದೇಶ (space). ಕಾಲ-ದೇಶಗಳ (time and space) ಪರಿಮಿತಿಗೆ ಒಳಪಡುವ ಮನುಷ್ಯ ತನ್ನ ವ್ಯಾವಹಾರಿಕ ಜೀವನಕ್ಕೆ ಅನುಕೂಲವಾಗುವಂತೆ ಮಾಡಿಕೊಂಡಿರುವ 'ಅಪರ' ಕಾಲವೆಂಬ ಕಲ್ಪಿತ ವಿಭಾಗವೇ ಕ್ಯಾಲೆಂಡರ್. ಶಾಲಿವಾಹನ ಶಕೆಯ ಪಂಚಾಂಗದ ಪ್ರಕಾರ ಜನವರಿ ಒಂದನೆಯ ದಿನಾಂಕ ಹೊಸ ವರ್ಷದ ಆರಂಭವೇನೂ ಅಲ್ಲ. ಅದರ ಪ್ರಕಾರ ಈಗ ಹಾಲೀ ನಡೆಯುತ್ತಿರುವ 'ಖರ'ನಾಮ ಸಂವತ್ಸರ ಹೋಗಿ 'ನಂದನ' ಎಂಬ ಹೊಸ ಸಂವತ್ಸರ ಬರಲು ಇನ್ನೂ ಮಾರ್ಚ್ ತಿಂಗಳಲ್ಲಿ ಯುಗಾದಿ ಪಾದಾರ್ಪಣೆ ಮಾಡುವುದನ್ನು ಕಾಯಬೇಕು. ವಾಸ್ತವವಾಗಿ ಸೂರ್ಯನ ಸುತ್ತ ಭೂಮಿ ಸುತ್ತುತ್ತಿದೆಯೆಂಬುದು ವೈಜ್ಞಾನಿಕ ಸತ್ಯವಾದರೂ ನೋಡುವ ಕಣ್ಣುಗಳಿಗೆ ಸೂರ್ಯನು ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗಿ ಭೂಮಿಯ ಸುತ್ತ ತಿರುಗುತ್ತಿದ್ದಾನೆಂಬ ಭ್ರಮೆ ಉಂಟಾಗುತ್ತದೆ. ಅದೇ ತೆರನಾದ ಇನ್ನೊಂದು ಭ್ರಾಮಕ ಸ್ಥಿತಿಯೇ ಈ ಕ್ಯಾಲೆಂಡರ್ ಅಥವಾ ಪಂಚಾಂಗದಲ್ಲಿ ಬರುವ ಭೂತ-ವರ್ತಮಾನ-ಭವಿಷ್ಯಗಳೆಂಬ ಕಾಲಚಕ್ರ. ಈ ಕಾಲಚಕ್ರದ ಅಡಿಯಲ್ಲಿ ಕತ್ತರಿಸಿ ಹೋಗುವವನು ಮನುಷ್ಯನೇ ಹೊರತು ಕಾಲವಲ್ಲ.

ಸುಮಾರು 19 ವರ್ಷಗಳ ಹಿಂದೆ (8.11.1992) ನಡೆದ ಒಂದು ಅಹಿತಕರ ಘಟನೆ. ಅಂದು ಸಿರಿಗೆರೆಯಲ್ಲಿ ನಮ್ಮ ಲಿಂಗೈಕ್ಯ ಗುರುವರ್ಯರಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಮೊದಲನೆಯ ಶ್ರದ್ಧಾಂಜಲಿ ಸಮಾರಂಭವಿತ್ತು. ಆ ಸಮಾರಂಭಕ್ಕೆ ನಾಡಿನ ಪ್ರಮುಖ ಮಠಾಧೀಶರನ್ನು ಮಾತ್ರ ಆಹ್ವಾನಿಸಲಾಗಿತ್ತು. ಯಾವ ಮಂತ್ರಿಮಹೋದಯರನ್ನೂ, ರಾಜಕಾರಣಿಗಳನ್ನೂ ಕರೆದಿರಲಿಲ್ಲ. ಸಭೆ ಆರಂಭವಾಗುತ್ತಿದ್ದಂತೆ ಆಗಿನ ಮುಖ್ಯಮಂತ್ರಿಗಳಾಗಿದ್ದ ಎಸ್. ಬಂಗಾರಪ್ಪನವರು ಅನಿರೀಕ್ಷಿತವಾಗಿ ಆಗಮಿಸಿದರು. ಮುಖ್ಯಮಂತ್ರಿ ಕುರ್ಚಿಯ ಯಾವ ಹಮ್ಮು ಬಿಮ್ಮುಗಳಿಲ್ಲದೆ, ಲಿಂಗೈಕ್ಯ ಗುರುಗಳವರ ಮೇಲಿನ ಗೌರವ ಭಾವದಿಂದ ಕರೆಯಲಿ ಬಿಡಲಿ ಬಂದೇ ಬಿಟ್ಟರು. ಅದು ವರ್ಣರಂಜಿತ ರಾಜಕೀಯ ಬದುಕಿನ ಬಂಗಾರಪ್ಪನವರ ನಿರಾಡಂಬರ ಮುಖವಾಗಿತ್ತು. ಮಠದ ಲಕ್ಷಾಂತರ ಭಕ್ತರು ಸೇರಿದ್ದ ಸಭೆಯಲ್ಲಿ ಪಾಲ್ಗೊಂಡು ತಮ್ಮ ಜನಪ್ರಿಯತೆಯನ್ನು ಹೆಚ್ಚಿಸಿಕೊಳುವ ಸಲುವಾಗಿ ಬಂದಿದ್ದಾರೆ ಎಂದು ಅವರ ರಾಜಕೀಯ ವಿರೋಧಿಗಳು ಆಡಿಕೊಂಡರು.



ಮುಖ್ಯಮಂತ್ರಿ ಬಂಗಾರಪ್ಪನವರು ಲಿಂಗೈಕ್ಯ ಗುರುವರ್ಯರಿಗೆ ತಮ್ಮ ನುಡಿನಮನವನ್ನು ಸಲ್ಲಿಸಲು ಮೈಕ್ ಮುಂದೆ ನಿಂತು ಮಾತನಾಡಲು ಆರಂಭಿಸುತ್ತಿದ್ದಂತೆಯೇ ಸಭೆಯಲ್ಲಿ ಗದ್ದಲ ಶುರುವಾಯಿತು. ಸರ್ಕಾರವು ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಪೂರೈಸಿಲ್ಲ ಎಂಬ ಕಾರಣಕ್ಕೆ ಗದ್ದಲ ಎಂದು ಭಾವಿಸಿದ್ದ ನಮ್ಮ ಊಹೆ ತಪ್ಪಾಗಿತ್ತು. ಕ್ಷಣಾರ್ಧದಲ್ಲಿ ಸಭಾಂಗಣದ ಪಕ್ಕದಲ್ಲಿದ್ದ ಎರಡು ಸರ್ಕಾರೀ ಕಾರುಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿಬಿಟ್ಟರು; ನೋಡ ನೋಡುತ್ತಿದ್ದಂತೆಯೇ ಅವು ಸುಟ್ಟು ಭಸ್ಮವಾದವು. ಸಚಿವಸಂಪುಟದಲ್ಲಿ ಸ್ಥಾನ ಸಿಗಲಿಲ್ಲವೆಂಬ ಕಾರಣಕ್ಕೆ ಬಂಗಾರಪ್ಪನವರಿಗೆ ಮುಖಭಂಗ ಮಾಡಲೆಂದು ಅವರ ಪಕ್ಷದ ರಾಜಕೀಯ ವಿರೋಧಿಗಳೇ ಸಂಚು ಮಾಡಿದ್ದೆಂದು ನಂತರ ತಿಳಿಯಿತು. ಉದ್ರಿಕ್ತ ಗುಂಪೊಂದು ಬಂಗಾರಪ್ಪನವರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಭೆಯತ್ತ ಧಾವಿಸಿ ಅವರು ಮಾತನಾಡದಂತೆ ಅಡ್ಡಿಪಡಿಸಿತು. ನಮ್ಮ ಯಾವ ಸಭೆಯಲ್ಲೂ ಈ ತರಹದ ಕೂಗಾಟ, ಆರ್ಭಟಗಳು ಎಂದೂ ನಡೆದಿರಲಿಲ್ಲ. ಸಭೆಯನ್ನು ನಿಯಂತ್ರಿಸಲು ಪೋಲೀಸರ ಸಂಖ್ಯೆ ಅಷ್ಟಾಗಿ ಇರಲಿಲ್ಲ. ನಮ್ಮ ಪಕ್ಕದಲ್ಲಿದ್ದ ಸಾಣೇಹಳ್ಳಿ ಶ್ರೀಗಳು ಕೈಯಲ್ಲಿ ಕೋಲನ್ನು ಹಿಡಿದು ಸಭಿಕರತ್ತ ನುಗ್ಗಿದರು. ಸಭೆ ನಿಯಂತ್ರಣ ತಪ್ಪಿ ಏನಾದರೂ ಅನಾಹುತವಾಗಬಹುದೆಂಬ ಭೀತಿಯಿಂದ ಜಿಲ್ಲಾರಕ್ಷಣಾಧಿಕಾರಿಗಳು ನಮ್ಮ ಹತ್ತಿರ ಬಂದು ಮುಖ್ಯಮಂತ್ರಿಗಳನ್ನು ಮಠದ ಕಾರಿನಲ್ಲಿ ಸುರಕ್ಷಿತವಾಗಿ ಕರೆದುಕೊಂಡು ಹೋಗ ಬಯಸಿದರು. ಪಕ್ಕದಲ್ಲಿದ್ದ ಹಿರಿಯ ಪತ್ರಕರ್ತರಾದ ಪಾಟೀಲ ಪುಟ್ಟಪ್ಪನವರು ಅದನ್ನು ಕೇಳಿಸಿಕೊಂಡು ಮುಖ್ಯಮಂತ್ರಿಗಳು ಮಾತನಾಡದೆ ಹಿಂಬಾಗಿಲಲ್ಲಿ ಹಿಂದಿರುಗುವಂತಾದರೆ ನಾಡಿಗೆ ಅವಮಾನ ಎಂದು ನಮಗೆ ಹೇಳಿದರು. ಕೊನೆಯಲ್ಲಿ ಮಾತನಾಡಬೇಕಿದ್ದ ನಾವು ಮಧ್ಯೆ ಪ್ರವೇಶಿಸಿ ಕೂಡಲೇ ಬಂಗಾರಪ್ಪನವರ ಕೈಯಲ್ಲಿದ್ದ ಮೈಕನ್ನು ಪಡೆದು ಎದ್ದು ನಿಂತೆವು. ಸಭೆಯಲ್ಲಿ ಕುಳಿತೇ ಮಾತನಾಡುವ ಪದ್ಧತಿಯನ್ನು

ರೂಢಿಸಿಕೊಂಡಿದ್ದ ನಮ್ಮನ್ನು ಅಂದು ನಿಂತು ಮಾತನಾಡತೊಡಗಿದ್ದನ್ನು ನೋಡಿ ಸಭೆ ವಿಸ್ಮಯಗೊಂಡಿತು. ಸಾಣೇಹಳ್ಳಿ ಶ್ರೀಗಳ ಲಾಠಿಪ್ರಹಾರದ ಮಧ್ಯೆ ಏರುದನಿಯಲ್ಲಿ ನಮ್ಮ ಮಾತಿನ ಚಾಟಿ ಸಭೆಯತ್ತ ಬೀಸತೊಡಗಿತು:

"ಈ ದೇಶದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಮಾತನಾಡುವ ವಾಕ್‌ಸ್ವಾತಂತ್ರ್ಯವನ್ನು ನಮ್ಮ ಸಂವಿಧಾನ ಕಲ್ಪಿಸಿಕೊಟ್ಟಿದೆ. ಒಬ್ಬ ಜನಸಾಮಾನ್ಯನಿಗೆ ಮಾತನಾಡುವ ಹಕ್ಕು ಇರುವಾಗ ಈ ನಾಡಿನ ಮುಖ್ಯಮಂತ್ರಿಗೆ ಮಾತನಾಡದಂತೆ ನೀವು ಅಡ್ಡಿಪಡಿಸುವುದು ಸಂವಿಧಾನ ಬಾಹಿರ ನಡವಳಿಕೆ. ನೀವು ಬಂಗಾರಪ್ಪನವರ ಮಾತನ್ನು ಕೇಳಿ ಬಿಡಿ, ಆದರೆ ಈ ರಾಜ್ಯದ ಮುಖ್ಯಮಂತ್ರಿಯ ಮಾತನ್ನು ಕೇಳಲೇ ಬೇಕು. ಅವರು ಹೇಳಿದ ಮಾತನ್ನು ಒಪ್ಪಲೇಬೇಕೆಂಬ ನಿರ್ಬಂಧ ಏನೂ ಇಲ್ಲ. ಅವರಾಡುವ ಮಾತುಗಳು ನಿಮಗೆ ಒಪ್ಪಿಗೆ ಇಲ್ಲದಿದ್ದರೆ ಅದನ್ನು ವಿರೋಧಿಸಲು ಪ್ರಜಾಸತ್ತಾತ್ಮಕವಾದ ಮಾರ್ಗಗಳಿವೆ. ಅವುಗಳನ್ನು ಅನುಸರಿಸಬೇಕೇ ಹೊರತು ಇಂತಹ ದುಂಡಾವೃತ್ತಿಯನ್ನಲ್ಲ. ನಿಮ್ಮ ಈ ವರ್ತನೆಯನ್ನು ನೋಡಿದರೆ ನೀವು ಪ್ರಜ್ಞಾಪೂರ್ವಕವಾಗಿ ಹೀಗೆ ಕೋಲಾಹಲ ಮಾಡುತ್ತಿದ್ದೀರೆಂದು ಅನ್ನಿಸುವುದಿಲ್ಲ. ಅಗಲಿಹೋದ ಲಿಂಗೈಕ್ಯ ಗುರುವರ್ಯರ ಚೇತನ ಅವರ ನಂತರ ನಿಮ್ಮನ್ನು ಮುನ್ನಡೆಸುವ ಶಕ್ತಿ-ಸಾಮರ್ಥ್ಯಗಳು ನಮ್ಮಲ್ಲಿವೆಯೇ ಎಂದು ಪರೀಕ್ಷಿಸಲು ನಿಮ್ಮಿಂದ ಹೀಗೆ ಮಾಡಿಸುತ್ತಿರುವಂತೆ ತೋರುತ್ತದೆ. 'ಶಿಷ್ಯರಿಗೆ ಅಂಜಿ ಗುರುವೂ, ಗುರುವಿಗೆ ಅಂಜಿ ಶಿಷ್ಯರೂ ನಡೆದುಕೊಳ್ಳಬೇಕೆ'ಂಬುದು ನಮ್ಮ ಗುರುವರ್ಯರ ಆಣತಿ. ಅವರು ನಡೆಸುತ್ತಿರುವ ಈ ಸತ್ವಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ನಮ್ಮ-ನಿಮ್ಮ ಮೇಲಿದೆ. ಮುಖ್ಯಮಂತ್ರಿ ಬಂಗಾರಪ್ಪನವರು ಮಾತನಾಡಲೇಬೇಕು, ನೀವು ಅವರ ಮಾತನ್ನು ಒಪ್ಪಿ, ಬಿಡಿ, ಕೇಳಿಸಿಕೊಳ್ಳಲೇಬೇಕು" ಎಂದು ಹೇಳಿದಾಗ ಸಭೆಯಲ್ಲಿ ಕರತಾಡನ ಮೊಳಗಿತು.

ಮೇಲಿನಂತೆ ಸಭೆಯನ್ನು ಆತ್ಮವಿಶ್ವಾಸಕ್ಕೆ ತೆಗೆದುಕೊಂಡು 'ನೀವು ಮಾತನಾಡಿರಿ' ಎಂದು ಮುಖ್ಯಮಂತ್ರಿ ಬಂಗಾರಪ್ಪನವರ ಕೈಗೆ ಮೈಕನ್ನು ಕೊಟ್ಟಾಗ ಅವರು ತಮ್ಮ ಕೃತಜ್ಞತೆಯನ್ನು ಸೂಚಿಸಿ ಸುಮಾರು ಅರ್ಧಗಂಟೆ ಮಾತನಾಡಿದರು. ಲಿಂಗೈಕ್ಯ ಗುರುವರ್ಯರು ಸೊರಬದಲ್ಲಿ ಅವರ ಮನೆಗೆ ದಯಮಾಡಿಸಿದ್ದ ದಿನಗಳನ್ನು ಭಾವುಕರಾಗಿ ನೆನೆಸಿಕೊಂಡರು. ಅಂದು ನಡೆದ ಈ ಘಟನೆಯನ್ನು ತಮ್ಮ ಜೀವಮಾನದಲ್ಲಿ ಎಂದೂ ಮರೆಯುವುದಿಲ್ಲವೆಂದು ಹೇಳಿ ಸಭೆಗೆ ವಂದಿಸಿ ಮಾತು ಮುಗಿಸಿದರು.

ಬಂಗಾರಪ್ಪನವರು ಮತ್ತು ನಾವು 1960-63 ರ ಅವಧಿಯಲ್ಲಿ ಶಿವಮೊಗ್ಗದಲ್ಲಿ ವಿದ್ವಾನ್ ರಾಧಾಕೃಷ್ಣನ್‌ರವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕಲಿತ ಸಹಪಾಠಿಗಳೆಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಆಗ ನಾವು ಶಿವಮೊಗ್ಗದ ಸರಕಾರೀ ಪ್ರೌಢಶಾಲೆಯಲ್ಲಿ ಓದುತ್ತಿದ್ದ ಹಳ್ಳಿಯ ಹುಡುಗ. ಅವರು ವಕೀಲವೃತ್ತಿಯಲ್ಲಿದ್ದ ಯುವಕರು; ನೀಳಕಾಯದ ಶುಭ್ರ ಶ್ವೇತವಸ್ತ್ರಧಾರಿ. ತುಳಜಾಭವಾನಿ ಕೇರಿಯಲ್ಲಿದ್ದ ಸಂಗೀತ ಅಧ್ಯಾಪಕರ ಮನೆಯಲ್ಲಿ ಸಂಜೆಯ ಹೊತ್ತು ಬಂದು ರಾಗತಾಳಬದ್ಧವಾಗಿ ತೊಡೆತಟ್ಟಿ ಹಾಡುತ್ತಿದ್ದ ಅವರ ಸಂಗೀತಕ್ಕೆ ನಮ್ಮ ಪಿಟೀಲುವಾದನದ ಸಾಥ್ ನೀಡಿದ ಆ ದಿನಗಳು ಈಗಲೂ ನಮ್ಮ ಕಣ್ಮುಂದೆ ಹಚ್ಚಹಸಿರಾಗಿವೆ. ನಂತರ ಅವರು ರಾಗ-ತಾಳ ಸರಿಯಿಲ್ಲದ ರಾಜಕೀಯಕ್ಕೆ ಧುಮ್ಮಿಕ್ಕಿದರು. ನಾವೀರ್ವರು ಕ್ರಮಿಸಿದ ದಾರಿಗಳು ಬೇರೆ ಬೇರೆಯೇ ಆದವು. ಅಪರೂಪಕ್ಕೆ ಸಭೆ-ಸಮಾರಂಭಗಳಲ್ಲಿ ಭೇಟಿಯಾದಾಗ 'ಈಗಲೂ ಪಿಟೀಲು ನುಡಿಸುತ್ತೀರಾ?' ಎಂದು ನಗುಮುಖದಿಂದ ಕೇಳುತ್ತಿದ್ದರು. ನಮ್ಮ ಗುರುವರ್ಯರು ಅಗಲಿದಾಗ ಆಹ್ವಾನವಿಲ್ಲದೆಯೂ ಆಗಮಿಸಿ ಗೌರವ ಸಲ್ಲಿಸಿದ್ದ ಅವರನ್ನು ಮೊನ್ನೆ ಅವರು ಅಗಲಿಹೋದ ದಿನದಂದು ನೋಡಲು ಮತ್ತು ಅವರ ಕುಟುಂಬವರ್ಗದವರನ್ನು ಸಂತೈಸಲು ಆಗಲಿಲ್ಲವಲ್ಲಾ ಎಂಬ ವಿಷಾದ ನಮ್ಮನ್ನು ಆವರಿಸಿದೆ.

ಬಂಗಾರಪ್ಪನವರ ನಿಧನದ ಸಂದರ್ಭದಲ್ಲಿ ಮಾಜಿ ಪ್ರಧಾನಿಗಳು, ಮಾಜಿ ಮತ್ತು ಹಾಲಿ ಮುಖ್ಯಮಂತ್ರಿಗಳು, ಸಚಿವರುಗಳು, ಎಲ್ಲಾ ರಾಜಕೀಯ ಪಕ್ಷಗಳ ಅಧ್ಯಕ್ಷರು ಮತ್ತು ಮುಖಂಡರು ಧಾವಿಸಿ ಅಂತಿಮ ನಮನ ಸಲ್ಲಿಸಿದ್ದಾರೆ. ಇದು ಉತ್ತಮ ಸದ್ಭಾವನೆಯ ನಡವಳಿಕೆ. ಇದೇ ತೆರನಾದ ಸದ್ಭಾವನೆ ವಿಧಾನ ಮಂಡಲದ ಒಳಗೂ ಬರಬೇಕು. ಹಾವು ಮುಂಗಸಿಗಳಂತೆ ಸದನದೊಳಗೆ ಮತ್ತು ಹೊರಗೆ ಕಚ್ಚಾಡುವುದನ್ನು ಕೆಸರೆರಚಾಡುವುದನ್ನು ಬಿಡಬೇಕು. ಮುಂಬರುವ ವರ್ಷಗಳಲ್ಲಾದರೂ ವೈಯಕ್ತಿಕ ನಿಂದನೆ ಮತ್ತು ಚಾರಿತ್ರ್ಯಹರಣದಂತಹ ಕೆಳಮಟ್ಟದ ರಾಜಕೀಯಕ್ಕೆ ಇತಿಶ್ರೀ ಹಾಡಬೇಕು. ನಾಡನ್ನು ಕಟ್ಟುವ ಕೆಲಸದಲ್ಲಿ ಪಕ್ಷಭೇದ ಮರೆತು ಎಲ್ಲರೂ ಕೆಲಸ ಮಾಡುವಂತಾಗಲಿ ಎಂಬುದೇ ನಮ್ಮ ಹಾರೈಕೆ!

29.12.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ